**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಕ್ರಿಮಿನಲ್ ಮಿಸಲೆನಿಯಸ್. ನಂ. 708/2023**

| | | | |
|---|---|---|---|
| **ಹೆಸರು** | **:** | **ಗಜಾನಂದ** | **RW-2** |
| **ತಂದೆಯ ಹೆಸರು** | **:** | **ತಿಪ್ಪಣ್ಣಾ** | **ದಿನಾಂಕಃ 03-12-2025** |
| **ವಯಸ್ಸು** | **:** | **37 ವರ್ಷ** | |
| **ಉದ್ಯೋಗ** | **:** | **ಒಕ್ಕಲುತನ** | |
| **ವಾಸಸ್ಥಳ** | **:** | **ನರನಾಳ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎದುರುದಾರನ ಪರ ಶ್ರೀ SSM ವಕೀಲರಿಂದಃ**

ನಾನು ಎದುರುದಾರನ ಮನೆಯ ಪಕ್ಕದ ಮನೆಯವನು. ಅರ್ಜಿದಾರಳು ಎದುರುದಾರನ ಹೆಂಡತಿ ಇರುತ್ತಾಳೆ. ದಿನಾಂಕ 20-03-2019ರಲ್ಲಿ ಅರ್ಜಿದಾರಳ ಮದುವೆ ಎದುರುದಾರನ ಜೊತೆ ಆಗಿರುತ್ತದೆ. ಅರ್ಜಿದಾರಳು ಎದುರುದಾರನ ಮನೆಯಲ್ಲಿ ಒಂದು ತಿಂಗಳು ಉಳಿದುಕೊಂಡು ಎದುರುದಾರ ಅವಳಿಗೆ ಹೊಡೆಯುತ್ತಾನೆ ಎಂದು ಸುಳ್ಳು ಹೇಳಿ ಹೋಗಿರುತ್ತಾಳೆ. ಎದುರುದಾರನ ಮನೆಯಲ್ಲಿ ಜಗಳವಾಡುವುದು ಕೇಳಿ ಅವರ ಮನೆಗೆ ಹೋಗುತ್ತಿದ್ದೆ. ಆಗ ಅರ್ಜಿದಾರಳ ಸಹೋದರರು ಮನೆಗೆ ಬಂದು ಎದುರುದಾರನಿಗೆ ಹೊಡೆಯುತ್ತಿದ್ದರು. ಸದರಿ ಅರ್ಜಿದಾರಳ ಸಹೋದರರು ನನ್ನ ಮಗಳಿಗೆ ಬೈಯುತ್ತಿಯಾ ಎಂದು ಸುಳ್ಳು ಹೇಳಿ ಹೊಡೆಯುತ್ತಿದ್ದರು.

ಎದುರುದಾರ ಕೂಲಿ ಕೆಲಸ ಮಾಡುತ್ತಾನೆ. ಎದುರುದಾರ ಪ್ರತಿ ದಿನ ರೂ. 200/- ಸಂಪಾಧನೆ ಮಾಡುತ್ತಾನೆ. ಎದುರುದಾರ ನನ್ನ ಜೊತೆ ಕೂಲಿ ಕೆಲಸ ಮಾಡುತ್ತಾನೆ. ಎದುರುದಾರನ ಮದುವೆಗೆ ನಾನು ಹೋಗಿದ್ದೇನೆ. ಅರ್ಜಿದಾರರು ಯಾವುದೇ ಹಣ ಅಥವಾ ಸಮಾನುಗಳನ್ನು ಎದುರುದಾರನಿಗೆ ಮದುವೆ ಸಮಯಕ್ಕೆ ಕೊಟ್ಟಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರವಾಗಿ ಶ್ರೀ SBK ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**C/C ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ.**